ಕರ್ನಾಟಕ ಸರ್ಕಾರ

# ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.

---

ಸಂಖ್ಯೆ:- ಆಡಳಿತ2(1) ಶಿ.ದಿ.ಮಾ-01/ 2021-22 ದಿನಾಂಕ:-25-08-2021.

-:ಸುತ್ತೋಲೆ:-

ವಿಷಯ:-ಪ್ರಸಕ್ತ ಸಾಲಿನ ಜಿಲ್ಲಾ, ತಾಲ್ಲೂಕು ಮತ್ತು ಶಾಲಾ ಮಟ್ಟದ ಶಿಕ್ಷಕರ ದಿನಾಚರಣೆ ಆಯೋಜಿಸುವ ಕುರಿತಾದ ಮಾರ್ಗಸೂಚಿಗಳು.

*********

ಪ್ರಸ್ತುತ ರಾಜ್ಯದಲ್ಲಿ ಕೋವಿಡ್-19 ಸೋಂಕು ವ್ಯಾಪಕವಾಗಿ ಹರಡುವ ಸಂಭವ ಇರುವ ಹಿನ್ನಲೆಯಲ್ಲಿ ಸಾರ್ವಜನಿಕ ಆರೋಗ್ಯ ಮತ್ತು ಸುರಕ್ಷಾ ದೃಷ್ಟಿಯಿಂದ ಸರ್ಕಾರವು ಈ ಸಾಲಿನ ಶಿಕ್ಷಕರ ದಿನಾಚರಣೆಯನ್ನು ಸರಳವಾಗಿ ಮತ್ತು ಸುರಕ್ಷಿತವಾಗಿ ಆಚರಿಸಲು ತೀರ್ಮಾನಿಸಿರುವ ಹಿನ್ನಲೆಯಲ್ಲಿ, ಪ್ರಸಕ್ತ ಸಾಲಿನ ಜಿಲ್ಲಾ, ತಾಲ್ಲೂಕು ಮತ್ತು ಶಾಲಾ ಮಟ್ಟದ ಶಿಕ್ಷಕರ ದಿನಾಚರಣೆಯನ್ನು ದಿನಾಂಕ: 05-09-2021 ರ ಭಾನುವಾರದಂದು ಕೆಳಕಂಡಂತೆ ಆಯೋಜಿಸಲು ಇಲಾಖಾಧಿಕಾರಿಗಳಿಗೆ ಈ ಮೂಲಕ ತಿಳಿಸಲಾಗಿದೆ.

## ಜಿಲ್ಲಾ ಮಟ್ಟದ ಸಮಾರಂಭ:

### ವೇದಿಕೆ :

ವೇದಿಕೆಯ ಮೇಲೆ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು, ಮಾನ್ಯ ಸಂಸತ್ ಸದಸ್ಯರು, ಮಾನ್ಯ ವಿಧಾನ ಸಭಾ / ವಿಧಾನ ಪರಿಷತ್ತಿನ ಸದಸ್ಯರು, ಮಾನ್ಯ ಜಿಲ್ಲಾ ಪಂಚಾಯತ್ ಅಧ್ಯಕ್ಷರು, ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಇವರುಗಳು ಮಾತ್ರ ಆಸೀನರಾಗಿರುವಂತೆ ವೇದಿಕೆಯನ್ನು ಸಜ್ಜುಗೊಳಿಸುವುದು.

### ವೇದಿಕೆಯ ಮುಂಭಾಗದ ಆವರಣ:

- ಮೊದಲ ಸಾಲಿನಲ್ಲಿ ಜಿಲ್ಲಾ ಮಟ್ಟದ ಸ್ಥಳೀಯ ಸಂಸ್ಥೆಗಳ ಚುನಾಯಿತ ಜನಪ್ರತಿನಿಧಿಗಳು. (10 ಮಂದಿ ಮೀರದಂತೆ) ಆಸೀನರಾಗಿರುವಂತೆ ವ್ಯವಸ್ಥೆ ಮಾಡುವುದು.
- ಎರಡನೇಯ ಸಾಲಿನಲ್ಲಿ ಸರ್ಕಾರಿ ನೌಕರರ / ಪ್ರಾಥಮಿಕ / ಪ್ರೌಢ ಶಾಲಾ ಶಿಕ್ಷಕರ ಸಂಘದ ಜಿಲ್ಲಾಮಟ್ಟದ ಅಧ್ಯಕ್ಷರು ಆಸೀನರಾಗಿರುವುದು (ಎಲ್ಲಾ ಸಂಘಗಳೂ ಸೇರಿದಂತೆ ಗರಿಷ್ಠ - 10 ಮಂದಿಗೆ ಮಾತ್ರ)
- ಮೂರನೇ ಸಾಲಿನಲ್ಲಿ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು (10 ಮಂದಿ ಮೀರದಂತೆ)
- ವೇದಿಕೆಯ ಬಲಭಾಗದಲ್ಲಿ ಮಾಧ್ಯಮದ ಪ್ರತಿನಿಧಿಗಳು
- ವೇದಿಕೆಯ ಎಡಭಾಗದಲ್ಲಿ ಪ್ರಶಸ್ತಿ ಪುರಸ್ಕೃತ ಶಿಕ್ಷಕರು

**ಆಹ್ವಾನಿತರು :**

ಆಹ್ವಾನ ಪತ್ರಿಕೆಯನ್ನು 50 ಮಂದಿಗೆ ಮೀರದಂತೆ ಮುದ್ರಿಸುವುದು ಮತ್ತು ಆಹ್ವಾನಿತರ ಆಸನ ವ್ಯವಸ್ಥೆಯನ್ನು ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವ ರೀತಿಯಲ್ಲಿ ವ್ಯವಸ್ಥೆ ಮಾಡುವುದು. ಆಹ್ವಾನ ಪತ್ರಿಕೆಯೊಂದಿಗೆ ಆಗಮಿಸುವವರಿಗೆ ಮಾತ್ರ ಅವಕಾಶ ಕಲ್ಪಿಸುವುದು.

**ಕಾರ್ಯಕ್ರಮದ ವಿವರಗಳನ್ನು ಈ ಕೆಳಕಂಡಂತೆ ಆಯೋಜಿಸುವುದು**

| ಕ್ರ.ಸಂ | ಕಾರ್ಯಕ್ರಮದ ವಿವರ | ಸಮಯ |
|---|---|---|
| 1 | ನಾಡಗೀತೆ ಮತ್ತು ರೈತಗೀತೆ (4 ಶಿಕ್ಷಕರು ಮಾತ್ರ) | 10ನಿಮಿಷಗಳು (ಆಯೋಜನೆಯೂ ಸೇರಿದಂತೆ) |
| 2 | ಡಾ.ಸರ್ವೇಪಲ್ಲಿ ರಾಧಾಕೃಷ್ಣನ್ ರವರ ಭಾವಚಿತ್ರಕ್ಕೆ ಗಣ್ಯರಿಂದ ಪುಷ್ಪನಮನ (ಮುಖ್ಯ ವೇದಿಕೆಯಲ್ಲಿ ಆಸೀನರಾಗಿರುವ ಗಣ್ಯರಿಗೆ ಮಾತ್ರ) | 5 ನಿಮಿಷ |
| 3 | ಸ್ವಾಗತ ಭಾಷಣ | 5 ನಿಮಿಷ |
| 4 | ಪ್ರಾಸ್ತಾವಿಕ ನುಡಿಗಳು | 15 ನಿಮಿಷ |
| 5 | ಪ್ರಶಸ್ತಿ ಪ್ರಧಾನ ನೆನಪಿನ ಕಾಣಿಕೆ ಮತ್ತು ಪ್ರಶಸ್ತಿ ಪತ್ರ | 20 ನಿಮಿಷ |
| 6 | ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರಿಂದ ಶಿಕ್ಷಕರ ದಿನಾಚರಣೆಯ ಕುರಿತಂತೆ ಸಂದೇಶ | 15 ನಿಮಿಷ |
| 7 | ಸಮಾರಂಭದ ಅಧ್ಯಕ್ಷರ ಭಾಷಣ | 10 ನಿಮಿಷ |
| 8 | ವಂದನಾರ್ಪಣೆ | 05 ನಿಮಿಷ |
| 9 | ರಾಷ್ಟ್ರ ಗೀತೆ | 52 ಸೆಕೆಂಡುಗಳು |

**ತಾಲ್ಲೂಕು ಮಟ್ಟದ ಸಮಾರಂಭ:**

**ವೇದಿಕೆ :**

ವೇದಿಕೆಯ ಮೇಲೆ ಮಾನ್ಯ ಸ್ಥಳೀಯ ವಿಧಾನ ಸಭಾ / ವಿಧಾನ ಪರಿಷತ್ತಿನ ಸದಸ್ಯರು, ಮಾನ್ಯ ತಾಲ್ಲೂಕು ಪಂಚಾಯತ್ ಅಧ್ಯಕ್ಷರು, ತಾಲ್ಲೂಕು ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿಗಳು, ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಸಂಬಂಧಿಸಿದ ತಾಲ್ಲೂಕಿನ ತಹಶೀಲ್ದಾರ್ ಮಾತ್ರ ಆಸೀನರಾಗಿರುವಂತೆ ವೇದಿಕೆಯನ್ನು ಸಜ್ಜುಗೊಳಿಸುವುದು.

**ವೇದಿಕೆಯ ಮುಂಭಾಗದ ಆವರಣ:**

- ಮೊದಲ ಸಾಲಿನಲ್ಲಿ ತಾಲ್ಲೂಕು ಮಟ್ಟದ ಸ್ಥಳೀಯ ಸಂಸ್ಥೆಗಳ ಚುನಾಯಿತ ಜನಪ್ರತಿನಿಧಿಗಳು. (10 ಮಂದಿ ಮೀರದಂತೆ) ಆಸೀನರಾಗಿರುವಂತೆ ವ್ಯವಸ್ಥೆ ಮಾಡುವುದು.
- ಎರಡನೇಯ ಸಾಲಿನಲ್ಲಿ ಸರ್ಕಾರಿ ನೌಕರರ / ಪ್ರಾಥಮಿಕ / ಪ್ರೌಢ ಶಾಲಾ ಶಿಕ್ಷಕರ ಸಂಘದ ತಾಲ್ಲೂಕು ಮಟ್ಟದ ಅಧ್ಯಕ್ಷರು ಆಸೀನರಾಗಿರುವುದು (ಎಲ್ಲಾ ಸಂಘಗಳೂ ಸೇರಿದಂತೆ ಗರಿಷ್ಠ – 10 ಮಂದಿಗೆ ಮಾತ್ರ)
- ಮೂರನೇ ಸಾಲಿನಲ್ಲಿ ಇಲಾಖೆಯ ತಾಲ್ಲೂಕು ಮಟ್ಟದ ಅಧಿಕಾರಿಗಳು (10 ಮಂದಿ ಮೀರದಂತೆ)
- ವೇದಿಕೆಯ ಬಲಭಾಗದಲ್ಲಿ ಮಾಧ್ಯಮದ ಪ್ರತಿನಿಧಿಗಳು

**ಆಹ್ವಾನಿತರು :**

ಆಹ್ವಾನ ಪತ್ರಿಕೆಯನ್ನು 50 ಮಂದಿಗೆ ಮೀರದಂತೆ ಮುದ್ರಿಸುವುದು ಮತ್ತು ಆಹ್ವಾನಿತರ ಆಸನ ವ್ಯವಸ್ಥೆಯನ್ನು ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವ ರೀತಿಯಲ್ಲಿ ವ್ಯವಸ್ಥೆ ಮಾಡುವುದು. ಆಹ್ವಾನ ಪತ್ರಿಕೆಯೊಂದಿಗೆ ಆಗಮಿಸುವವರಿಗೆ ಮಾತ್ರ ಅವಕಾಶ ಕಲ್ಪಿಸುವುದು.

**ಕಾರ್ಯಕ್ರಮದ ವಿವರಗಳನ್ನು ಈ ಕೆಳಕಂಡಂತೆ ಆಯೋಜಿಸುವುದು**

| ಕ್ರ.ಸಂ | ಕಾರ್ಯಕ್ರಮದ ವಿವರ | ಸಮಯ |
|---|---|---|
| 1 | ನಾಡಗೀತೆ ಮತ್ತು ರೈತಗೀತೆ (4 ಶಿಕ್ಷಕರು ಮಾತ್ರ) | 10 ನಿಮಿಷಗಳು (ಆಯೋಜನೆಯೂ ಸೇರಿದಂತೆ) |
| 2 | ಡಾ.ಸರ್ವೇಪಲ್ಲಿ ರಾಧಾಕೃಷ್ಣನ್ ರವರ ಭಾವಚಿತ್ರಕ್ಕೆ ಗಣ್ಯರಿಂದ ಪುಷ್ಪನಮನ (ಮುಖ್ಯ ವೇದಿಕೆಯಲ್ಲಿ ಆಸೀನರಾಗಿರುವ ಗಣ್ಯರಿಗೆ ಮಾತ್ರ) | 5 ನಿಮಿಷ |
| 3 | ಸ್ವಾಗತ ಭಾಷಣ | 5 ನಿಮಿಷ |
| 4 | ಪ್ರಾಸ್ತಾವಿಕ ನುಡಿಗಳು | 15 ನಿಮಿಷ |
| 5 | ಮಾನ್ಯ ಶಾಸಕರಿಂದ ಶಿಕ್ಷಕರ ದಿನಾಚರಣೆಯ ಕುರಿತಂತೆ ಸಂದೇಶ | 15 ನಿಮಿಷ |
| 6 | ವಂದನಾರ್ಪಣೆ | 05 ನಿಮಿಷ |
| 7 | ರಾಷ್ಟ್ರ ಗೀತೆ | 52 ಸೆಕೆಂಡುಗಳು |

**ಶಾಲಾ ಮಟ್ಟದ ಸಮಾರಂಭ:**

ಪ್ರತಿ ಶಾಲಾ ಹಂತದಲ್ಲಿ ಶಾಲಾ ಮುಖ್ಯಸ್ಥರು, ಎಸ್.ಡಿ.ಎಂ.ಸಿ ಅಧ್ಯಕ್ಷರು, ಸದಸ್ಯರು ಮತ್ತು ಎಲ್ಲಾ ಶಿಕ್ಷಕರು ಡಾ. ಸರ್ವೇಪಲ್ಲಿ ರಾಧಾಕೃಷ್ಣನ್ ರವರ ಭಾವಚಿತ್ರಕ್ಕೆ ಪುಷ್ಪನಮನವನ್ನು ಸಲ್ಲಿಸಿ ಗೌರವ ಸೂಚಿಸುವುದರ ಮೂಲಕ ಶಿಷ್ಟಾಚಾರವನ್ನು ಪಾಲಿಸಿ ಸರಳವಾಗಿ ಮತ್ತು ಅರ್ಥಪೂರ್ಣವಾಗಿ ಆಚರಿಸುವುದು.

**ಜಿಲ್ಲಾ, ತಾಲ್ಲೂಕು ಮತ್ತು ಶಾಲಾ ಮಟ್ಟದಲ್ಲಿ ಅನುಸರಿಸಬೇಕಾದ ಸಾಮಾನ್ಯ ಅಂಶಗಳು:**

1. ರಾಜ್ಯ, ಜಿಲ್ಲಾ, ತಾಲ್ಲೂಕು ಮತ್ತು ಶಾಲಾ ಮಟ್ಟದಲ್ಲಿ **ದಿನಾಂಕ:05-09-2021 ರಂದೇ ಶಿಕ್ಷಕರ ದಿನಾಚರಣೆಯನ್ನು ಆಚರಿಸುವುದು.**
2. ಸಮಾರಂಭದ ಎಲ್ಲಾ ಹಂತಗಳಲ್ಲಿಯೂ ಸುರಕ್ಷತೆಯನ್ನು ಮತ್ತು ಸಾಮಾಜಿಕ ಅಂತರವನ್ನು ಕಡ್ಡಾಯವಾಗಿ ಪಾಲಿಸುವುದು ಮತ್ತು ಹೂಗುಚ್ಛ, ಹಾರ, ತುರಾಯಿ, ಹಣ್ಣಿನ ಬುಟ್ಟಿ, ನೆನಪಿನ ಕಾಣಿಕೆ ಇತ್ಯಾದಿ ಯಾವುದೇ ರೀತಿಯ ಕಾಣಿಕೆಗಳನ್ನು ನೀಡಬಾರದು ಬದಲಾಗಿ ಕನ್ನಡ ಪುಸ್ತಕಗಳನ್ನು ನೀಡಬಹುದು.
3. ಕಾರ್ಯಕ್ರಮದಲ್ಲಿ ಭಾಗವಹಿಸುವ ಎಲ್ಲರೂ ಪ್ರವೇಶದ್ವಾರದಲ್ಲಿಯೇ ಥರ್ಮಲ್ ಸ್ಕ್ರೀನಿಂಗ್‌ಗೆ ಒಳಗಾಗುವುದು, ಕೈಗಳಿಗೆ ಸ್ಯಾನಿಟೈಸರ್ ಮಾಡಿಸಿಕೊಳ್ಳುವುದು ಮತ್ತು ಮುಖಗವಸುಗಳನ್ನು (ಮಾಸ್ಕ್) ಕಡ್ಡಾಯವಾಗಿ ಧರಿಸುವುದು.

4. ಕಾರ್ಯಕ್ರಮದಲ್ಲಿ ಸುರಕ್ಷಿತ ವಿಧಾನದಲ್ಲಿ ಶುದ್ಧ ಕುಡಿಯುವ ನೀರನ್ನು ಒದಗಿಸುವುದನ್ನು ಹೊರತುಪಡಿಸಿ ಊಟ/ಲಘು ಉಪಹಾರ ಇತ್ಯಾದಿಗಳ ವ್ಯವಸ್ಥೆಯನ್ನು ಮಾಡತಕ್ಕದ್ದಲ್ಲ.
5. ಕೋವಿಡ್-19 ಹಿನ್ನೆಲೆಯಲ್ಲಿ ಸರ್ಕಾರದ / ಜಿಲ್ಲಾಢಳಿತದ ನಿರ್ದೇಶನದಂತೆ ಸ್ಥಳೀಯ ಅಗತ್ಯತೆಗನುಸಾರವಾಗಿ ಎಲ್ಲಾ ಸುರಕ್ಷತಾ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು.
6. ಮೇಲ್ಕಂಡ ಕಾರ್ಯಕ್ರಮ ಸೂಚಿಯನ್ನು ಹೊರತುಪಡಿಸಿ ಉಳಿದ ಯಾವುದೇ ಚಟುವಟಿಕೆಗಳನ್ನು ಆಯೋಜಿಸುವಂತಿಲ್ಲ ಮತ್ತು ಯಾವ ಹಂತಗಳಲ್ಲಿಯೂ ಸಹ ಮಕ್ಕಳು / ವಿದ್ಯಾರ್ಥಿಗಳು ಭಾಗವಹಿಸುವಂತಿಲ್ಲ.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ.

ಗೆ :

1) ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ.
2) ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ.
3) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ / ಕಲಬುರ್ಗಿ
4) ಉಪನಿರ್ದೇಶಕರು, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ಹಾಗೂ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿಗಳ ಕಛೇರಿ, ಬೆಂಗಳೂರು.
5) ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ.
6) ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರುಗಳಿಗೆ (ಆಯಾ ಜಿಲ್ಲಾ ಉಪನಿರ್ದೇಶಕರು(ಆಡಳಿತ) ರವರ ಮುಖಾಂತರ)
7) ರಾಜ್ಯದ ಎಲ್ಲಾ ಶಾಲೆಗಳು ಮುಖ್ಯ ಶಿಕ್ಷಕರುಗಳಿಗೆ(ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ)

ಪ್ರತಿಯನ್ನು ಗೌರವಪೂರ್ವಕವಾಗಿ,

1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತಾ ಸದರಿ ವಿಷಯವನ್ನು ಮಾನ್ಯ ಸಚಿವರ ಅವಗಾಹನೆಗೆ ತರುವಂತೆ ಕೋರಿದೆ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಶಿಕ್ಷಣ), 6 ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಕಛೇರಿ ಪ್ರತಿ.